ಕರ್ನಾಟಕ ವಿಧಾನ ಪರಿಷತ್ತು

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 324
2)	ಮಾನ್ಯ ಸದಸ್ಯರ ಹೆಸರು	: ಶ್ರೀ ಕೆ. ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
3)	ಉತ್ತರಿಸುವ ದಿನಾಂಕ	: 17.02.2022
4)	ಉತ್ತರಿಸುವ ಸಚಿವರು	: ಗೃಹ ಸಚಿವರು

ಕ್ರ.ಸ	ಪ್ರಶ್ನೆ	ಉತ್ತರ
ಅ)	ಸಾರ್ವಜನಿಕರಲ್ಲಿ ಕಾನೂನಿನ ಅರಿವು ಮೂಡಿಸಬೇಕಿರುವ ಪೊಲೀಸರೇ ತಾವು ಬಳಸುತ್ತಿರುವ ಇಲಾಖಾ ವಾಹನಗಳಿಗೆ ವಿಮೆ ಅವಧಿ ಮೀರಿದ್ದರೂ. ನವೀಕರಿಸದೇ ವಾಹನ ಚಲಾಯಿಸುತ್ತಿರುವುದು ಇತ್ತೀಚೆಗೆ ತಿಳಿದು ಬಂದಿದ್ದು, ಪೊಲೀಸ್ ಇಲಾಖೆಯ ವಾಹನಗಳಿಗೆ ಒಂದು ಕಾನೂನು, ಜನಸಾಮಾನ್ಯರಿಗೆ ಒಂದು ಕಾನೂನು ಮಾಡಿರುವುದು ಸಮಂಜಸವಾಗಿರುವುದೇ: (ವಿವರ ನೀಡುವುದು)	ಪೊಲೀಸ್ ಇಲಾಖೆಯು ಶಿಸ್ತುಬದ್ಧ ಇಲಾಖೆಯಾಗಿದ್ದು, ಇಲಾಖೆಯಲ್ಲಿರುವ ಯಾವುದೇ ವಾಹನಗಳು ವಿಮೆ ಮೀರಿ ಚಾಲನೆಯಲ್ಲಿರುವುದಿಲ್ಲ. ಯಾವುದೇ ವಾಹನದ ವಿಮೆ ಅವಧಿ ಮೀರಿದ್ದರೂ ಸಹ ನವೀಕರಿಸದೆ ವಾಹನಗಳನ್ನು ಚಲಾಯಿಸಲು ಕಾನೂನಿನಲ್ಲಿ ಯಾವುದೇ ಅವಕಾಶಗಳು ಇರುವುದಿಲ್ಲ. ಜನ ಸಾಮಾನ್ಯರ ವಾಹನಗಳಿಗೂ ಮತ್ತು ಇಲಾಖೆಯ ವಾಹನಗಳಿಗೂ ಒಂದೇ ರೀತಿಯ ಕಾನೂನು ಇರುತ್ತದೆ. ಇಲಾಖೆಯ ವಾಹನಗಳ ವಿಮೆ ಮುಕ್ತಾಯವಾಗುತ್ತಿದ್ದಾಗ ಸಂಬಂದಪಟ್ಟ ಘಟಕಾಧಿಕಾರಿಗಳು ವಿಮೆಯನ್ನು ನವೀಕರಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ವಿಮೆ ಅವಧಿ ಮುಗಿದ ಯಾವುದೇ ವಾಹನಗಳು ಚಾಲನೆಯಲ್ಲಿರುವುದಿಲ್ಲ.
ಆ	ನವೀಕರಿಸದಿರುವ ಪೊಲೀಸ್ ಇಲಾಖಾ ವಾಹನಗಳ ಮೇಲೆ ಎಲ್ಲರಿಗೂ ಅನ್ವಯಿಸುವ ಕಾನೂನಿನಡಿ ಸರ್ಕಾರ ಕ್ರಮ ಕೈಗೊಳ್ಳುವುದೇ :	ನವೀಕರಿಸದಿರುವ ಪೊಲೀಸ್ ಇಲಾಖೆಯ ಯಾವುದೇ ವಾಹನಗಳು ಚಾಲನೆಯಲ್ಲಿರುವುದಿಲ್ಲ.

ಸಂಖ್ಯೆ:ಹೆಚ್‌ಡಿ 01 ಇಎಮ್‌ವಿ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು